# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1633

ಸದಸ್ಯರ ಹೆಸರು : ಶ್ರೀ ಸಿ.ಟಿ. ರವಿ (ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸುವ ದಿನಾಂಕ : 19.12.2025.

ಉತ್ತರಿಸುವವರು : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಚುನಾಯಿತ ಅವಧಿ ಮುಕ್ತಾಯಗೊಂಡಿರುವ ಗ್ರಾಮ ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳು ಯಾವುವು; (ಅವಧಿ ಮುಕ್ತಾಯಗೊಂಡ ದಿನಾಂಕ ಸಹಿತ ವಿವರ ನೀಡುವುದು) | • ರಾಜ್ಯದಲ್ಲಿ ಚುನಾಯಿತ ಅವಧಿ ಮುಕ್ತಾಯಗೊಂಡಿರುವ ಗ್ರಾಮ ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳ ವಿವರಗಳನ್ನು ಹಾಗೂ ಈ ಪೈಕಿ ಗ್ರಾಮ ಪಂಚಾಯಿತಿಗಳಲ್ಲಿ ಹಾಗೂ ಜಿಲ್ಲಾ ಪಂಚಾಯಿತಿಗಳಲ್ಲಿ ಆಡಳಿತಾಧಿಕಾರಿಗಳನ್ನು ನೇಮಕ ಮಾಡಲಾದ ವಿವರಗಳನ್ನು ಅನುಬಂಧ-1 ಮತ್ತು ಅನುಬಂಧ-2 ರಲ್ಲಿ ನೀಡಿದೆ.<br>• ರಾಜ್ಯದ ಗ್ರಾಮ ಪಂಚಾಯತಿಗಳಿಗೆ ಡಿಸೆಂಬರ್ 2020 ರಲ್ಲಿ ಸದಸ್ಯ ಸ್ಥಾನಗಳಿಗೆ ಚುನಾವಣೆ ನಡೆಸಲಾಗಿರುತ್ತದೆ. ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಹುದ್ದೆಗಳಿಗೆ ಜನವರಿ-ಫೆಬ್ರುವರಿ 2021 ರಲ್ಲಿ ಚುನಾವಣೆ ನಡೆಸಿ ಆಯ್ಕೆ ಮಾಡಲಾಗಿದ್ದು, ಈ ಅವಧಿಯು ಜನವರಿ- ಫೆಬ್ರುವರಿ 2026 ರವರೆಗೆ ಇರುತ್ತದೆ. ಅವಧಿ ಮುಗಿದ ನಂತರ ಚುನಾವಣೆ ನಡೆಸಲು ಕ್ರಮ ವಹಿಸಲಾಗುವುದು.<br>• ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯಿತಿಗಳ ಅವಧಿಯು ಜೂನ್ 2021ಕ್ಕೆ ಮುಕ್ತಾಯಗೊಂಡಿರುತ್ತದೆ. ಅವಧಿಯು ಮುಗಿದ ನಂತರ ಚುನಾವಣೆಯನ್ನು ನಡೆಸುವ ಸಿದ್ಧತೆಯಲ್ಲಿದ್ದಾಗ ರಾಜ್ಯದಲ್ಲಿ ಕೋವಿಡ್ ಸಾಂಕ್ರಾಮಿಕ ರೋಗ ಹಿನ್ನೆಲೆಯಲ್ಲಿ ಚುನಾವಣೆ ನಡೆಸಲು ಸಾಧ್ಯವಾಗಲಿಲ್ಲ.<br>• ತದನಂತರ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ಕ್ಕೆ ತಿದ್ದುಪಡಿ ತಂದು ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗವನ್ನು ರಚಿಸಲಾಗಿತ್ತು. ಆಯೋಗವು ನೀಡಿದ ಶಿಫಾರಸ್ಸಿನಂತೆ ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಯ ಸೀಮಾ ಗಡಿಯನ್ನು ಗುರುತಿಸಿ ಅಧಿಸೂಚಿಸಲಾಗಿತ್ತು.<br>• ನಗರಾಭಿವೃದ್ಧಿ ಇಲಾಖೆಯು ಸೆಪ್ಟೆಂಬರ್-ಅಕ್ಟೋಬರ್ - 2025ರಲ್ಲಿ ಕೆಲವು ಗ್ರಾಮ ಪಂಚಾಯತಿಗಳನ್ನು ಪಟ್ಟಣ ಪಂಚಾಯತಿ / ಪುರಸಭೆ / ನಗರ ಸಭೆಗಳಾಗಿ ಪರಿವರ್ತನೆ ಮಾಡಿ ಅಧಿಸೂಚನೆ ಹೊರಡಿಸಿದ್ದರಿಂದ 07 ಜಿಲ್ಲೆಗಳು ಮತ್ತು 08 ತಾಲ್ಲೂಕುಗಳಿಗೆ ಸಂಬಂಧಿಸಿದಂತೆ ಜಿಲ್ಲಾ ಪಂಚಾಯತಿ ಹಾಗೂ ತಾಲ್ಲೂಕು ಪಂಚಾಯತಿಗಳ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ವ್ಯಾಪ್ತಿಯಿಂದ ಕೈ ಬಿಡಲು ಅಧಿಸೂಚನೆ ಹೊರಡಿಸಿ, ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತಿಗಳ ಸೀಮಾ/ ಗಡಿಯನ್ನು ಗುರುತಿಸಿ ದಿನಾಂಕ:09.12.2025 ರಂದು ಅಧಿಸೂಚಿಸಲಾಗಿದೆ. |
| (ಆ) | ಈ ಪೈಕಿ ಎಷ್ಟು ಗ್ರಾಮ ಪಂಚಾಯ್ತಿ ಹಾಗೂ ಜಿಲ್ಲಾ ಪಂಚಾಯ್ತಿಗಳಿಗೆ ಸರ್ಕಾರ ಆಡಳತಾಧಿಕಾರಿಗಳನ್ನು ನೇಮಕ ಮಾಡಿದೆ; ಅವಧಿ ಮುಕ್ತಾಯಗೊಂಡಿರುವ ಗ್ರಾಮ ಪಂಚಾಯ್ತಿ ಹಾಗೂ ಜಿಲ್ಲಾ ಪಂಚಾಯ್ತಿಗಳಿಗೆ ಸರ್ಕಾರ ಏಕೆ ಚುನಾವಣೆ ನಡೆಸಲು ಕ್ರಮ ಕೈಗೊಂಡಿಲ್ಲ; ಚುನಾವಣೆ ನಡೆಸುವ ಕುರಿತು ಸರ್ಕಾರದ ನಿಲುವೇನು; | |

| | | |
|---|---|---|
| | | • ಮೇಲಿನ ಎಲ್ಲಾ ವಿವರಗಳ ಮಾಹಿತಿಯೊಂದಿಗೆ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆ ನಡೆಸುವುದಕ್ಕೆ ಸಂಬಂಧಿಸಿದಂತೆ ಸಚಿವ ಸಂಪುಟದ ಆದ್ಯ ಗಮನಕ್ಕೆ ತರಲಾಗಿದೆ.<br>• ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತಿ ಚುನಾವಣೆಗಳಿಗೆ ಸಂಬಂಧಿಸಿದಂತೆ ಮೀಸಲಾತಿ ಅಧಿಸೂಚನೆ ರಾಜ್ಯ ಚುನಾವಣಾ ಆಯೋಗಕ್ಕೆ ಒದಗಿಸುವಂತೆ ಸರ್ಕಾರದ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ನ್ಯಾಯಾಂಗ ನಿಂದನಾ ಅರ್ಜಿ ಸಂಖ್ಯೆ (CCC No).534/2024ನ್ನು ದಾಖಲಿಸಿದ್ದು, ಪ್ರಕರಣವು ದಿನಾಂಕ:12.12.2025 ರಂದು ವಿಚಾರಣೆಗೆ ಬಂದಿದ್ದು ಮಾನ್ಯ ಅಡ್ವೋಕೇಟ್ ಜನರಲ್ ರವರ ಮನವಿ ಮೇರೆಗೆ ಮುಂದಿನ ವಿಚಾರಣೆಯನ್ನು ದಿನಾಂಕ:30.01.2026ಕ್ಕೆ ನಿಗಧಿಪಡಿಸಿರುತ್ತದೆ.<br>• ಈಗಾಗಲೇ 31 ಜಿಲ್ಲಾ ಪಂಚಾಯಿತಿಗಳು ಮತ್ತು 239 ತಾಲ್ಲೂಕು ಪಂಚಾಯಿತಿಗಳಿಗೆ ಸಂಬಂಧಿಸಿದಂತೆ ಕರಡು ಮೀಸಲಾತಿಯನ್ನು ಸಿದ್ಧಪಡಿಸಲು ಇಲಾಖಾ ಹಂತದಲ್ಲಿ ಕ್ರಮ ಕೈಗೊಳ್ಳಲಾಗಿದೆ.<br>• ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿ ಕ್ಷೇತ್ರಗಳಿಗೆ ಸರ್ಕಾರವು ಅಂತಿಮ ಮೀಸಲಾತಿಯನ್ನು ಅಧಿಸೂಚಿಸಿ ರಾಜ್ಯ ಚುನಾವಣಾ ಆಯೋಗಕ್ಕೆ ಒದಗಿಸಿದ ನಂತರ ರಾಜ್ಯ ಚುನಾವಣಾ ಆಯೋಗವು ಚುನಾವಣೆ ನಡೆಸಲು ಕ್ರಮ ಕೈಗೊಳ್ಳಬೇಕಿದೆ. |
| (ಇ) | ಚುನಾವಣೆ ನಡೆಸುವ ವಿಚಾರದಲ್ಲಿ ಉಚ್ಚ ನ್ಯಾಯಾಲಯ ನೀಡಿರುವ ಸೂಚನೆ ಏನು; | • ಗ್ರಾಮ ಪಂಚಾಯತಿಗಳಿಗೆ ಮೀಸಲಾತಿಯನ್ನು ನಿಗಧಿಪಡಿಸಿ ಅಧಿಸೂಚನೆಯನ್ನು ರಾಜ್ಯ ಚುನಾವಣಾ ಆಯೋಗಕ್ಕೆ ಒದಗಿಸುವಂತೆ ಸರ್ಕಾರದ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ 33211/2025(PIL) ದಾಖಲಿಸಿದ್ದು, ಪ್ರಕರಣವು ದಿನಾಂಕ:11.12.2025 ರಂದು ವಿಚಾರಣೆಗೆ ಬಂದಿದ್ದು, ಮುಂದಿನ ವಿಚಾರಣೆಯನ್ನು ದಿನಾಂಕ:28.01.2026ಕ್ಕೆ ನಿಗಧಿಪಡಿಸಿರುತ್ತದೆ.<br>• ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತಿ ಚುನಾವಣೆಗಳಿಗೆ ಸಂಬಂಧಿಸಿದಂತೆ ಮೀಸಲಾತಿ ಅಧಿಸೂಚನೆ ರಾಜ್ಯ ಚುನಾವಣಾ ಆಯೋಗಕ್ಕೆ ಒದಗಿಸುವಂತೆ ಸರ್ಕಾರದ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ನ್ಯಾಯಾಂಗ ನಿಂದನಾ ಅರ್ಜಿ ಸಂಖ್ಯೆ (CCC No).534/2024ನ್ನು ದಾಖಲಿಸಿದ್ದು, ಪ್ರಕರಣವು ದಿನಾಂಕ:12.12.2025 ರಂದು ವಿಚಾರಣೆಗೆ ಬಂದಿದ್ದು ಮಾನ್ಯ ಅಡ್ವೋಕೇಟ್ ಜನರಲ್ ರವರ ಮನವಿ ಮೇರೆಗೆ ಮುಂದಿನ ವಿಚಾರಣೆಯನ್ನು ದಿನಾಂಕ:30.01.2026ಕ್ಕೆ ನಿಗಧಿಪಡಿಸಿರುತ್ತದೆ. |

ಸಂಖ್ಯೆ: ಗ್ರಾಅಪ 1020 ಗ್ರಾಪಂಅ 2025

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.

ಅನುಬಂಧ - 1

| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸಿ.ಟಿ.ರವಿ (ವಿಧಾನ ಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ 1633 ರ ನಮೂನೆ-1 ವಿವರ | | | |
|---|---|---|---|
| ಕ್ರ.ಸಂ | ಜಿಲ್ಲಾ ಪಂಚಾಯತ್ | ಜಿಲ್ಲಾ ಪಂಚಾಯತ್ ಚುನಾಯಿತ ಪ್ರತಿನಿಧಿಗಳ ಅವಧಿ ಮುಕ್ತಾಯಗೊಂಡ ದಿನಾಂಕ | ಆಡಳಿತಾಧಿಕಾರಿ ನೇಮಕ ಮಾಡಲಾಗಿದೆಯೇ, ಹೌದು/ಇಲ್ಲ |
| 1 | ಬಾಗಲಕೋಟೆ | 05.05.2021 | ಹೌದು |
| 2 | ಬಳ್ಳಾರಿ | 28.04.2021 | ಹೌದು |
| 3 | ಬೆಳಗಾವಿ | 10.05.2021 | ಹೌದು |
| 4 | ಬೆಂಗಳೂರು ನಗರ | 09.05.2021 | ಹೌದು |
| 5 | ಬೆಂಗಳೂರು ಗ್ರಾಮಾಂತರ | 29.04.2021 | ಹೌದು |
| 6 | ಬೆಂಗಳೂರು ದಕ್ಷಿಣ (ರಾಮನಗರ) | 28.04.2021 | ಹೌದು |
| 7 | ಬೀದರ್ | 06.05.2021 | ಹೌದು |
| 8 | ಚಾಮರಾಜನಗರ | 29.04.2021 | ಹೌದು |
| 9 | ಚಿಕ್ಕಬಳ್ಳಾಪುರ | 06.05.2021 | ಹೌದು |
| 10 | ಚಿಕ್ಕಮಗಳೂರು | 03.05.2021 | ಹೌದು |
| 11 | ಚಿತ್ರದುರ್ಗ | 03.05.2021 | ಹೌದು |
| 12 | ದಕ್ಷಿಣ ಕನ್ನಡ | 27.04.2021 | ಹೌದು |
| 13 | ದಾವಣಗೆರೆ | 13.05.2021 | ಹೌದು |
| 14 | ಧಾರವಾಡ | 03.05.2021 | ಹೌದು |
| 15 | ಗದಗ | 04.05.2021 | ಹೌದು |
| 16 | ಹಾಸನ | 04.05.2021 | ಹೌದು |
| 17 | ಹಾವೇರಿ | 12.05.2021 | ಹೌದು |
| 18 | ಕಲಬುರಗಿ | 06.05.2021 | ಹೌದು |
| 19 | ಕೊಡಗು | 28.04.2021 | ಹೌದು |
| 20 | ಕೋಲಾರ | 12.05.2021 | ಹೌದು |
| 21 | ಕೊಪ್ಪಳ | 03.05.2025 | ಹೌದು |
| 22 | ಮಂಡ್ಯ | 01.05.2025 | ಹೌದು |
| 23 | ಮೈಸೂರು | 06.05.2021 | ಹೌದು |
| 24 | ರಾಯಚೂರು | 26.042021 | ಹೌದು |
| 25 | ಶಿವಮೊಗ್ಗ | 04.05.2021 | ಹೌದು |
| 26 | ತುಮಕೂರು | 10.05.2021 | ಹೌದು |
| 27 | ಉಡುಪಿ | 27.04.2021 | ಹೌದು |
| 28 | ಉತ್ತರ ಕನ್ನಡ | 26.04.2021 | ಹೌದು |
| 29 | ವಿಜಯಪುರ | 06.05.2021 | ಹೌದು |
| 30 | ವಿಜಯನಗರ | 28.04.2021 | ಹೌದು |
| 31 | ಯಾದಗಿರಿ | 03.05.2021 | ಹೌದು |

ಅನುಬಂಧ -2

| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸಿ.ಟಿ.ರವಿ (ವಿಧಾನ ಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ 1633 ರ ನಮೂನೆ-2 ವಿವರ | | | | |
|---|---|---|---|---|
| ಕ್ರ.ಸಂ | ಜಿಲ್ಲಾ ಪಂಚಾಯತ್ | ಗ್ರಾಮ ಪಂಚಾಯತಿ | ಗ್ರಾಮ ಪಂಚಾಯತ್ ಚುನಾಯಿತ ಪ್ರತಿನಿಧಿಗಳ ಅವಧಿ ಮುಕ್ತಾಯಗೊಂಡ ದಿನಾಂಕ | ಆಡಳಿತಾಧಿಕಾರಿ ನೇಮಕ ಮಾಡಲಾಗಿದೆಯೇ, ಹೌದು/ಇಲ್ಲ |
| 1 | ಬಾಗಲಕೋಟೆ | ಕೆಂದೂರ (ಬಾದಾಮಿ ತಾಲೂಕು) | ಕೆಂದೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ 01 ಗ್ರಾಮದಲ್ಲಿ ಮಾತ್ರ ಚುನಾವಣೆ ನಡೆದಿದ್ದು ನಿಯಮಾನುಸಾರ ಚುನಾಯಿತ ನಿಕಾಯ ರಚನೆಯಾಗದ ಕಾರಣ ಆಡಳಿತಾಧಿಕಾರಿಯನ್ನು ನೇಮಿಸಲಾಗಿದೆ. | ಹೌದು |
| | | ಬಾಡಗಂಡಿ (ಬೀಳಗಿ ತಾಲೂಕು) | 2015ರಲ್ಲಿ ಹೊಸ ಗ್ರಾಮ ಪಂಚಾಯಿತಿ ರಚನೆಯಾಗಿರುತ್ತದೆ, ಸದರಿ ಅವಧಿಯಿಂದ ಯಾವುದೇ ಚುನಾವಣೆ ನಡೆದಿರುವುದಿಲ್ಲ. | ಹೌದು |
| | | ಬಿಂಜವಾಡಗಿ | 23.03.2020 | ಹೌದು |
| | | ಹಾವರಗಿ (ಹುನಗುಂದ ತಾಲೂಕು) | 23.03.2021 | ಹೌದು |
| | | ಲಕ್ಷಾನಟ್ಟಿ (ಮುಧೋಳ ತಾಲೂಕು) | 26.06.2020 | ಹೌದು |
| | | ನೀಲಾನಗರ ಗ್ರಾಮ ಪಂಚಾಯಿತಿ | 01.05.2025 | ಹೌದು |
| 2 | ಬಳ್ಳಾರಿ | ಗ್ರಾಮ ಪಂಚಾಯಿತಿ ಚುನಾಯಿತ ಪ್ರತಿನಿಧಿಗಳ ಅವಧಿ ಮುಕ್ತಾಯಗೊಂಡಿರುವುದಿಲ್ಲ. | | ಇಲ್ಲ |
| 3 | ಬೆಳಗಾವಿ | ಗ್ರಾಮ ಪಂಚಾಯಿತಿ ಚುನಾಯಿತ ಪ್ರತಿನಿಧಿಗಳ ಅವಧಿ ಮುಕ್ತಾಯಗೊಂಡಿರುವುದಿಲ್ಲ. | | ಇಲ್ಲ |
| 4 | ಬೆಂಗಳೂರು ನಗರ | ದೊಡ್ಡತೋಗೂರು ಗ್ರಾಮ ಪಂಚಾಯಿತಿ | 08-07-2020 | ಹೌದು |
| 5 | ಬೆಂಗಳೂರು ಗ್ರಾಮಾಂತರ | ಗ್ರಾಮ ಪಂಚಾಯಿತಿ ಚುನಾಯಿತ ಪ್ರತಿನಿಧಿಗಳ ಅವಧಿ ಮುಕ್ತಾಯಗೊಂಡಿರುವುದಿಲ್ಲ. | | ಇಲ್ಲ |
| 6 | ಬೆಂಗಳೂರು ದಕ್ಷಿಣ (ರಾಮನಗರ) | ಗ್ರಾಮ ಪಂಚಾಯಿತಿ ಚುನಾಯಿತ ಪ್ರತಿನಿಧಿಗಳ ಅವಧಿ ಮುಕ್ತಾಯಗೊಂಡಿರುವುದಿಲ್ಲ. | | ಇಲ್ಲ |
| 7 | ಬೀದರ್ | ಗ್ರಾಮ ಪಂಚಾಯಿತಿ ಚುನಾಯಿತ ಪ್ರತಿನಿಧಿಗಳ ಅವಧಿ ಮುಕ್ತಾಯಗೊಂಡಿರುವುದಿಲ್ಲ. | | ಇಲ್ಲ |
| 8 | ಚಾಮರಾಜನಗರ | ಗ್ರಾಮ ಪಂಚಾಯಿತಿ ಚುನಾಯಿತ ಪ್ರತಿನಿಧಿಗಳ ಅವಧಿ ಮುಕ್ತಾಯಗೊಂಡಿರುವುದಿಲ್ಲ. | | ಇಲ್ಲ |
| 9 | ಚಿಕ್ಕಬಳ್ಳಾಪುರ | ಗ್ರಾಮ ಪಂಚಾಯಿತಿ ಚುನಾಯಿತ ಪ್ರತಿನಿಧಿಗಳ ಅವಧಿ ಮುಕ್ತಾಯಗೊಂಡಿರುವುದಿಲ್ಲ. | | ಇಲ್ಲ |
| 10 | ಚಿಕ್ಕ ಮಗಳೂರು | ಗ್ರಾಮ ಪಂಚಾಯಿತಿ ಚುನಾಯಿತ ಪ್ರತಿನಿಧಿಗಳ ಅವಧಿ ಮುಕ್ತಾಯಗೊಂಡಿರುವುದಿಲ್ಲ. | | ಇಲ್ಲ |

| | | | | |
|---|---|---|---|---|
| 11 | ಚಿತ್ರದುರ್ಗ | ಗ್ರಾಮ ಪಂಚಾಯಿತಿ ಚುನಾಯಿತ ಪ್ರತಿನಿಧಿಗಳ ಅವಧಿ ಮುಕ್ತಾಯಗೊಂಡಿರುವುದಿಲ್ಲ. | | ಇಲ್ಲ |
| 12 | ದಕ್ಷಿಣ ಕನ್ನಡ | ಅತಿಕಾರಿಬೆಟ್ಟು | 10-02-2026 | ಹೌದು |
| | | ಐಕಳ | 11-02-2026 | ಹೌದು |
| | | ಬಳ್ಕುಂಜೆ | 11-02-2026 | ಹೌದು |
| | | ಕಿಲ್ಪಾಡಿ | 07-02-2026 | ಹೌದು |
| | | ಶಮ್ಲಾಲ್ | 16-02-2026 | ಹೌದು |
| | | ಪಡುಪಣಂಬೂರು | 09-02-2026 | ಹೌದು |
| | | ಹಳೆಯಂಗಡಿ | 09-02-2026 | ಹೌದು |
| 13 | ದಾವಣಗೆರೆ | ಗ್ರಾಮ ಪಂಚಾಯಿತಿ ಚುನಾಯಿತ ಪ್ರತಿನಿಧಿಗಳ ಅವಧಿ ಮುಕ್ತಾಯಗೊಂಡಿರುವುದಿಲ್ಲ. | | ಇಲ್ಲ |
| 14 | ಧಾರವಾಡ | ಯಮನೂರು | 24.08.2016 | ಹೌದು |
| 15 | ಗದಗ | ಗ್ರಾಮ ಪಂಚಾಯಿತಿ ಚುನಾಯಿತ ಪ್ರತಿನಿಧಿಗಳ ಅವಧಿ ಮುಕ್ತಾಯಗೊಂಡಿರುವುದಿಲ್ಲ. | | ಇಲ್ಲ |
| 16 | ಹಾಸನ | ಗ್ರಾಮ ಪಂಚಾಯಿತಿ ಚುನಾಯಿತ ಪ್ರತಿನಿಧಿಗಳ ಅವಧಿ ಮುಕ್ತಾಯಗೊಂಡಿರುವುದಿಲ್ಲ. | | ಇಲ್ಲ |
| 17 | ಹಾವೇರಿ | ಗ್ರಾಮ ಪಂಚಾಯಿತಿ ಚುನಾಯಿತ ಪ್ರತಿನಿಧಿಗಳ ಅವಧಿ ಮುಕ್ತಾಯಗೊಂಡಿರುವುದಿಲ್ಲ. | | ಇಲ್ಲ |
| 18 | ಕಲಬುರಗಿ | ಕಲಬುರ್ಗಿ ಜಿಲ್ಲೆಯಲ್ಲಿ ಒಟ್ಟು 261 ಗ್ರಾ.ಪಂಚಾಯಿತಿಗಳಿದ್ದು, ಇವುಗಳಲ್ಲಿ 258 ಗ್ರಾ.ಪಂಚಾಯಿತಿಗಳಲ್ಲಿ ಚುನಾಯಿತ ಪ್ರತಿನಿಧಿಗಳ ಅವಧಿ ಮುಕ್ತಾಯಗೊಂಡಿರುವುದಿಲ್ಲ. | | |
| | | ರಾಮಪೂರ ಹಳ್ಳಿ (ತಾ. ಚಿತ್ತಾಪುರ) | ಸದರಿ ಗ್ರಾ.ಪಂ.ಯು ದಿನಾಂಕ: 01.01.2015ರಂದು ರಚನೆಯಾಗಿದ್ದು, ಪ್ರಸ್ತುತ ಇಂದಿನವರೆಗೂ ಚುನಾವಣೆ ನಡೆದಿರುವುದಿಲ್ಲ. | ಹೌದು |
| | | ಮಡಕಿ/ ಮುದ್ದಡಗಾ (ತಾ. ಕಮಲಾಪೂರ) | ಸದರಿ ಗ್ರಾ.ಪಂ.ಯು ದಿನಾಂಕ: 09.01.2015ರಂದು ರಚನೆಯಾಗಿದ್ದು, ಪ್ರಸ್ತುತ ಇಂದಿನವರೆಗೂ ಚುನಾವಣೆ ನಡೆದಿರುವುದಿಲ್ಲ. | ಹೌದು |
| | | ಹಾಳತಡಕಲ್(ತಾ: ಆಳಂದ) | ಸದರಿ ಗ್ರಾ.ಪಂ.ಯು ದಿನಾಂಕ: 09.01.2015ರಂದು ರಚನೆಯಾಗಿದ್ದು, ಪ್ರಸ್ತುತ ಇಂದಿನವರೆಗೂ ಚುನಾವಣೆ ನಡೆದಿರುವುದಿಲ್ಲ. | ಹೌದು |

| | | | | |
|---|---|---|---|---|
| 19 | ಕೊಡಗು | ಗ್ರಾಮ ಪಂಚಾಯಿತಿ ಚುನಾಯಿತ ಪ್ರತಿನಿಧಿಗಳ ಅವಧಿ ಮುಕ್ತಾಯಗೊಂಡಿರುವುದಿಲ್ಲ. | | ಇಲ್ಲ |
| 20 | ಕೋಲಾರ | ಗ್ರಾಮ ಪಂಚಾಯಿತಿ ಚುನಾಯಿತ ಪ್ರತಿನಿಧಿಗಳ ಅವಧಿ ಮುಕ್ತಾಯಗೊಂಡಿರುವುದಿಲ್ಲ. | | ಇಲ್ಲ |
| 21 | ಕೊಪ್ಪಳ | ಗ್ರಾಮ ಪಂಚಾಯಿತಿ ಚುನಾಯಿತ ಪ್ರತಿನಿಧಿಗಳ ಅವಧಿ ಮುಕ್ತಾಯಗೊಂಡಿರುವುದಿಲ್ಲ. | | ಇಲ್ಲ |
| 22 | ಮಂಡ್ಯ | ಗ್ರಾಮ ಪಂಚಾಯಿತಿ ಚುನಾಯಿತ ಪ್ರತಿನಿಧಿಗಳ ಅವಧಿ ಮುಕ್ತಾಯಗೊಂಡಿರುವುದಿಲ್ಲ. | | ಇಲ್ಲ |
| 23 | ಮೈಸೂರು | ಗ್ರಾಮ ಪಂಚಾಯಿತಿ ಚುನಾಯಿತ ಪ್ರತಿನಿಧಿಗಳ ಅವಧಿ ಮುಕ್ತಾಯಗೊಂಡಿರುವುದಿಲ್ಲ. | | ಇಲ್ಲ |
| 24 | ರಾಯಚೂರು | ಗ್ರಾಮ ಪಂಚಾಯಿತಿ ಚುನಾಯಿತ ಪ್ರತಿನಿಧಿಗಳ ಅವಧಿ ಮುಕ್ತಾಯಗೊಂಡಿರುವುದಿಲ್ಲ. | | ಇಲ್ಲ |
| 25 | ಶಿವಮೊಗ್ಗ | ಆಗಸನಹಳ್ಳಿ | 13.07.2020 | ಹೌದು |
| | | ಎಣ್ಣೆಕೊಪ್ಪ | 01.07.2020 | ಹೌದು |
| | | ಗೆಂಡ್ಲ | 29.06.2020 | ಹೌದು |
| | | ಹೆಚ್ಚೆ | 02.07.2020 | ಹೌದು |
| | | ಕಾತುವಳ್ಳಿ | 03.07.2020 | ಹೌದು |
| | | ಮಟಗುಪ್ಪೆ | 28.06.2020 | ಹೌದು |
| | | ತತ್ತೂರು | 29.06.2020 | ಹೌದು |
| | | ತವನಂದಿ | 28.06.2020 | ಹೌದು |
| 26 | ತುಮಕೂರು | ಗ್ರಾಮ ಪಂಚಾಯಿತಿ ಚುನಾಯಿತ ಪ್ರತಿನಿಧಿಗಳ ಅವಧಿ ಮುಕ್ತಾಯಗೊಂಡಿರುವುದಿಲ್ಲ. | | ಇಲ್ಲ |
| 27 | ಉಡುಪಿ | ಹೊಸಾಡು ಗ್ರಾಮ ಪಂಚಾಯಿತಿ | 28.06.2020 | ಹೌದು |
| 28 | ಉತ್ತರ ಕನ್ನಡ | ಗ್ರಾಮ ಪಂಚಾಯಿತಿ ಚುನಾಯಿತ ಪ್ರತಿನಿಧಿಗಳ ಅವಧಿ ಮುಕ್ತಾಯಗೊಂಡಿರುವುದಿಲ್ಲ. | | ಇಲ್ಲ |

| | | | | |
|---|---|---|---|---|
| 29 | ವಿಜಯಪುರ | ಅರಷಣಗಿ | 03.07.2020 | ಹೌದು |
| | | ಸಿದ್ಧನಾಥ ಆರ್.ಸಿ. | 01.07.2021 | ಹೌದು |
| | | ಗಣಿ ಆರ್.ಸಿ. | 03.09.2022 | ಹೌದು |
| | | ಚಾಂದಕವಟೆ | 01.07.2023 | ಹೌದು |
| | | ಯರಗಲ್ ಬಿ.ಕೆ. | 01.07.2024 | ಹೌದು |
| | | ಬಳಗಾನೂರು | 03.07.2025 | ಹೌದು |
| | | ಗುತ್ತರಗಿ | 03.07.2026 | ಹೌದು |
| 30 | ವಿಜಯನಗರ | ಗ್ರಾಮ ಪಂಚಾಯಿತಿ ಚುನಾಯಿತ ಪ್ರತಿನಿಧಿಗಳ ಅವಧಿ ಮುಕ್ತಾಯಗೊಂಡಿರುವುದಿಲ್ಲ. | | ಇಲ್ಲ |
| 31 | ಯಾದಗಿರಿ | ಗ್ರಾಮ ಪಂಚಾಯಿತಿ ಚುನಾಯಿತ ಪ್ರತಿನಿಧಿಗಳ ಅವಧಿ ಮುಕ್ತಾಯಗೊಂಡಿರುವುದಿಲ್ಲ. | | ಇಲ್ಲ |